### ಬಾವಿ ನಿಪುಣರಿಲ್ಲಿ ಸದಾಸಿದ್ಧ

'ಬೆಂಗಳೂರಿನಲ್ಲಿ ಮಣ್ಣು ವಡ್ಡ ಬಾವಿ ಕುಶಲಕರ್ಮಿಗಳ ತಂಡಗಳೇ ಸರಿಸುಮಾರು ಸಾವಿರದಷ್ಟು ಇರಬಹುದು' ಎನ್ನುತ್ತಾರೆ ಎಸ್. ವಿಶ್ವನಾಥ್. 'ಬೇಕಿದ್ದರೆ ದಿನಕ್ಕೆ ಸಾವಿರ ಇಂಗುಬಾವಿ ತೋಡಬಲ್ಲರು' ಎನ್ನುತ್ತಾರೆ.

ನಗರದಲ್ಲಿ ಮೂರಡಿ ವ್ಯಾಸ, ಇಪ್ಪತ್ತಡಿ ಆಳದ ಇಂಗುಬಾವಿಗೆ ಸಾಧಾರಣ ₹30 ಸಾವಿರ, ನಾಲ್ಕಡಿಯದಕ್ಕೆ ₹35 ಸಾವಿರ ಶುಲ್ಕ ಆಗುತ್ತದೆ. ಇದರಲ್ಲಿ ರಿಂಗ್ ಮತ್ತು ಜಲ್ಲಿ ಹಾಕಿ ಕಾಂಕ್ರೀಟ್ ಮುಚ್ಚಳ ಹಾಕಿಕೊಡುವ ಕೆಲಸವೂ ಸೇರುತ್ತದೆ. ನಗರ ಬಿಟ್ಟು ಬೇರೆಡೆಗೆ ಕೆಲಸಕ್ಕೆ ಬಂದರೆ ಜಲ್ಲಿ, ರಿಂಗು ಇತ್ಯಾದಿ ಇವರು ಬೇರೆಯವರಿಂದ ಕೊಳ್ಳಬೇಕು; ಇಲ್ಲವಾದರೆ ಬಾವಿ ತೋಡಿಸುವವರು ಕೊಡಬೇಕು. ಇವರಿಗೆ ಪ್ರಯಾಣ ವೆಚ್ಚ ಬೀಳುತ್ತದೆ. ಆಯಾಯ ಜಾಗದ ಮಣ್ಣಿನ ಸ್ಥಿತಿಗತಿ ನೋಡಿ ಶುಲ್ಕದಲ್ಲಿ ವ್ಯತ್ಯಾಸ ಆಗಬಹುದು.

ಇಂಗುಬಾವಿ ಮಾತ್ರವಲ್ಲ, ಇದೇ ಗಾತ್ರದ ಅಥವಾ ಗ್ರಾಹಕರಿಗೆ ಬೇಕಾದ ವ್ಯಾಸ, ಆಳದ ಬಾವಿಯನ್ನೂ ಇವರು ತೋಡುತ್ತಾರೆ. ಇದೇ ಕುಲಕಸುಬಾದ ಕಾರಣ ಬೇಗ ಕೆಲಸ ಮುಗಿಸಿಬಿಡುತ್ತಾರೆ. ಇಂಗುಬಾವಿಗಳ ಪರಿಚಯ ಬೆಂಗಳೂರೇತರ ನಗರ–ಗ್ರಾಮಗಳಲ್ಲಿ ಇಲ್ಲವೇ ಇಲ್ಲ ಎನ್ನಬಹುದು. ಈ ಕಾರಣ ಮತ್ತು ಈ ಸಿದ್ಧ ತಂಡಗಳ ಬಗ್ಗೆ ಗೊತ್ತಿಲ್ಲದ ಕಾರಣ ಇವರಿಗೆ ಹೊರಗಡೆಯಿಂದ ಬೇಡಿಕೆ ಬರುತ್ತಿಲ್ಲ. ಬೆಂಗಳೂರಿನಲ್ಲಿರುವ ಬಾವಿನಿರ್ಮಾಣ ನಿಪುಣರು ಧಾರಾಳ, ಆದರೆ ಕೆಲಸ ಕಡಿಮೆ.

ರಾಮಕೃಷ್ಣ, ಬಾವಿ ಕುಶಲಕರ್ಮಿ: 97435 38649; ವೆಂಕಟೇಶ್ ಪೆದ್ದಣ್ಣ, ಬಾವಿ ಕುಶಲಕರ್ಮಿ: 90807 39674.

ಜನರನ್ನು ಕ್ರಿಯಾಶೀಲರಾಗಿಸುತ್ತದೆ. ಕಳೆದ ವರ್ಷದಿಂದೀಚೆಗಿನ ಚೆನ್ನೈ ನಗರದ ನೀರಸಂಕಟ ಬೆಂಗಳೂರಿಗರನ್ನೂ ಒಂದಷ್ಟು ಎಬ್ಬಿಸಿದೆ' ಎನ್ನುವುದು ಎಲಾನ್ ಕುಳಂದೈವೇಲು ಅವರ ಅಭಿಪ್ರಾಯ. ಇವರು 'ವೈಟ್‌ಫೀಲ್ಡ್ ರೈಸಿಂಗ್' ವೇದಿಕೆಯ ವರ್ತೂರು ಕೆರೆ ಗುಂಪಿನ ಮುಖ್ಯಸ್ಥರು. ನಗರದ ಅಲ್ಲಲ್ಲಿ ಜನ 'ನೋಡಿ ಕಲಿಯಲು' ಆಸ್ಪದವಿರುವ ಇಂಗುಬಾವಿಗಳ ಮಾದರಿ ನಿರ್ಮಾಣವಾದರೆ ಅದು ಈ ನಿಟ್ಟಿನ ಕೆಲಸದ ವೇಗ ಹೆಚ್ಚಿಸಬಹುದು ಎನ್ನುತ್ತಾರೆ ಎಲಾನ್.

## ಹೆಚ್ಚುತ್ತಿರುವ ಒಲವು

ತೀರಾ ಈಚೆಗೆ 'ಮಿಲಿಯ ಇಂಗುಬಾವಿ'ಯ ಕನಸನ್ನು ಇನ್ನೂ ಹಲವರು ತಮ್ಮದಾಗಿಸುತ್ತಿದ್ದಾರೆ; ಕನಸು ಗರಿ ಕಟ್ಟುತ್ತಿದೆ. ಅಂಥವರಲ್ಲೊಬ್ಬರು 'ಫ್ರೆಂಡ್ಸ್ ಆಫ್ ಲೇಕ್ಸ್' ವೇದಿಕೆಯ ಸಹಸ್ಥಾಪಕ ರಾಮ್‌ಪ್ರಸಾದ್. ಮಿಲಿಯ ಇಂಗುಬಾವಿ ಅಭಿಯಾನ ಶತಮಾನಗಳಿಂದ ಇದೇ ಕುಲಕಸುಬು ಮಾಡುತ್ತಾ ಬಂದ ಜನಾಂಗದ ಜೀವನೋಪಾಯದೊಂದಿಗೆ ತಳಕು ಹಾಕಿಕೊಂಡಿದೆ. ಅದರೊಂದಿಗೆ ನಾವು ಮರೆಯಬಾರದ ವಿಚಾರ ಒಂದಿದೆ. ಬೆಂಗಳೂರಿನ ಜೀವಾಳವಾದ ಕೆರೆಗಳನ್ನು ಉಳಿಸಬೇಕಾದರೆ, ಅದಕ್ಕೂ ಮೊದಲು ಅಂತರ್ಜಲ ಮಟ್ಟ ಏರಿಸುವುದು ಅತ್ಯಗತ್ಯ.

'ಮಿಲಿಯ ಬಾವಿಯ ಸಾಕಾರಕ್ಕೆ ನಾವು ಬೋವಿ ಜನಾಂಗದವರನ್ನೇ ರಾಯಭಾರಿಗಳನ್ನಾಗಿಸಿದ್ದೇವೆ' ಎಂದು ರಾಮ್‌ಪ್ರಸಾದ್ ವಿವರಿಸುತ್ತಾರೆ – 'ಅವರು ಮನೆಮನೆಗಳಿಗೆ ಭೇಟಿಕೊಟ್ಟು ಇಂಗುಬಾವಿಯ ಮಹತ್ವದ ಬಗ್ಗೆ ತಿಳಿಸಿ ಕೆಲಸ ಕುದುರಿಸಲು ಯತ್ನಿಸುತ್ತಾರೆ.'

ರಾಜ್ಯದ ನಗರ ನೆರೆಬಾಧಿತ ಪ್ರದೇಶ, ಹಳ್ಳಿಗಳ ಆಯ್ದ ಸ್ಥಳಗಳಲ್ಲಿ ಇಂಗುಬಾವಿಗಳು ಬಹುದೊಡ್ಡ ಕೊಡುಗೆ ಕೊಡಬಲ್ಲವು. ತೆರೆದ ಬಾವಿ ಬತ್ತಿದ ದೊಡ್ಡ ಮನೆಯವರು ಚಾವಣಿ ನೀರನ್ನು ಅದರೊಳಕ್ಕೆ ಇಳಿಸಬಹುದು. ಅಂಗಳದ ನೀರು ಧಾರಾಳ ಇದ್ದರೆ ಒಂದು ಪುಟ್ಟ ಇಂಗುಬಾವಿ ಮಾಡಿ ಅದಕ್ಕೆ ತುಂಬಬಹುದು. ಈ ಹೆಜ್ಜೆಗಳನ್ನು ಸಮರ್ಪಕವಾಗಿ ಮಾಡಿದರೆ ಕೊಳವೆಬಾವಿ ತೋಡುವ ಅಗತ್ಯ ಇಲ್ಲ. ಅದಕ್ಕಿಂತ ಭರವಸೆಯ ನೀರಸ್ರೋತಸ್ಸು ಇವರದಾಗಬಹುದು.

## ಬಾವಿ ಇದ್ದಲ್ಲಿಗೆ ಬೇಕು ಇಂಗುಬಾವಿ

'ಬಾವಿ ಇರುವ ಊರುಗಳಲ್ಲೆಲ್ಲಾ ಇಂಗುಬಾವಿ ಪ್ರಸ್ತುತ. ಇಂಗುಬಾವಿಗಳ ನಿರ್ಮಾಣ ಬಾವಿಯಿಂದ ಮತ್ತೆ ನೀರೆತ್ತಿ ಬಳಸಲು ನಿಮಗೆ ದಾರಿ ಮಾಡಿಕೊಡುತ್ತದೆ' ಎನ್ನುತ್ತಾರೆ ವಿಶ್ವನಾಥ್. ಇನ್ನೂ ಒಂದು ಮುದ ಕೊಡುವ ಸಾಧ್ಯತೆ ಗಮನಿಸಿ. ಊರ ಮಂದಿ ಚೆನ್ನಾಗಿ ನೀರಿಂಗಿಸತೊಡಗಿದರೆ, ಅಥವಾ ಚೆನ್ನೈಯಲ್ಲಾದಂತೆ ಈ ಕೆಲಸ ಕಡ್ಡಾಯವಾದರೆ ನಿಮ್ಮ ಇಂಗುಬಾವಿ ಜಲದಾಯಿ ಬಾವಿ (ಸರ್ವೀಸ್ ವೆಲ್) ಆಗಬಹುದು. ಮೊದಮೊದಲು ಕೆಲವು ತಿಂಗಳ ಮಟ್ಟಿಗೆ. ಆಲಮಟ್ಟ ತುಂಬ ಏರಿದರೆ ಸತತವಾಗಿ. ಈ 'ಯೂ ಟರ್ನಿನ' ರೋಚಕ ಕತೆಗಳು 'ಬಯೋಮ್' ಬತ್ತಳಿಕೆಯಲ್ಲಿವೆ.

'ಈ ನಮ್ಮ ಕನಸು ಬೆಂಗಳೂರಿಗರ ಜನಸಾಮಾನ್ಯರ ಮನೆಮಾತಾಗಬೇಕು. ಹಾಗಾಗಬೇಕಾದರೆ ವಾರ್ಡಿಗೆ ಇಬ್ಬರು ಈ ಕೆಲಸ ಮಾಡಿ ಸುತ್ತಲಿನವರಿಗೆ ತೋರಿಸಿ ಹೇಳುವ ರಾಯಬಾರಿಗಳು ಮೂಡಿ ಬರಬೇಕು. ಈ ಬಗ್ಗೆ ಇಂಗ್ಲಿಷಿನಲ್ಲಿ ಬರೇ ಬೌದ್ಧಿಕ ಚರ್ಚೆ ಆದರೆ ಸಾಲದು. ಅದು ಕನ್ನಡ ಭಾಷೆಯಲ್ಲಿ ಹಬ್ಬಬೇಕು. ಬೇರೆಬೇರೆ ಮಾಧ್ಯಮಗಳು ಈ ವಿಚಾರದಲ್ಲಿ ದೊಡ್ಡ ಪಾತ್ರ ವಹಿಸಬಲ್ಲವು' ಎಂದು ವಿಶ್ವನಾಥ್ ತಮ್ಮ ಮನದಾಳದ ಮಾತು ಆಡುತ್ತಾರೆ.

'ನಾವು ಬೆಂಗಳೂರಿಗರು ಕಾಂಕ್ರೀಟ್ ಮೋಹಕ್ಕೇ ಅಂಟಿಕೊಂಡು ಕೂರುವುದು ಸಲ್ಲ. ತಂತಮ್ಮ ಜಾಗಗಳಲ್ಲಿ ನೀರಿಂಗಿಸುವುದು ತಮ್ಮ ಜವಾಬ್ದಾರಿ ಎಂದು ಅರ್ಥ ಮಾಡಿಕೊಳ್ಳಬೇಕು. ಎಲ್ಲೆಡೆ ಮಳೆಕೊಯ್ಲು ಮಾಡಬೇಕು. ಅಷ್ಟು ಮಾಡಿದರೂ ಸುಸ್ಥಿರತೆ ಬಾರದಿದ್ದರೆ ಮತ್ತೆ ಬೇರೆಯವರಲ್ಲಿ ನೀರು ಕೇಳೋಣ' ಎಂದು ರಾಮ್‌ಪ್ರಸಾದ್ ಕೊನೆಯ ಮಾತು ಆಡುತ್ತಾರೆ.

ಕೆ.ಪಿ. ಸಿಂಗ್ ಇನ್ನೂ ಒಂದು ಹೆಜ್ಜೆ ಮುಂದೆ ಹೋಗುತ್ತಾರೆ, "ಬೆಂಗಳೂರಿನವರಲ್ಲಿ ಹಣ ಇದೆ. ಇದ್ದವರು ಟ್ಯಾಂಕರ್ ನೀರು ಖರೀದಿಸುತ್ತಲೇ ಬದುಕಬಹುದು. ಬಡವರು ಏನು ಮಾಡಬೇಕು? 'ನೀವು ಮಾಡಿ, ಇಲ್ಲವಾದರೆ ನಾವೇ ಮಾಡಿ ನಿಮ್ಮಿಂದ ವಸೂಲು ಮಾಡುತ್ತೇವೆ' ಎಂಬ ಕಾನೂನು ಚೆನ್ನೈಯಲ್ಲಿ ಕೆಲಸ ಮಾಡಿತು. ಸರ್ಕಾರ ನಿದ್ರಿಸುತ್ತಿದೆ. ಮನಸ್ಸು ಮಾಡಿದರೆ 'ಮಿಲಿಯ ಇಂಗುಬಾವಿ'ಯ ಗುರಿಯನ್ನು ಎರಡು–ಮೂರು ವರ್ಷಗಳಲ್ಲಿ ಸಾಧಿಸಬಹುದು. ನೀರಿನ ಬಗೆಗಿರುವ ನಮ್ಮ ಜವಾಬ್ದಾರಿಯನ್ನು ನಿರ್ವಹಿಸದೆ ಬಹುದೂರದಿಂದ ತರುವುದು ಕದ್ದುಕೊಳ್ಳುವಂತೆಯೇ ಅಲ್ಲವೇ?"

ನೀರನ್ನು ಬಹುದೂರದಿಂದ ತರುವುದು ನೀರ ಕೊರತೆಗೆ ಸರಿಯಾದ ಪರಿಹಾರ ಕ್ರಮವಲ್ಲ. ಬೊಕ್ಕಸಕ್ಕೆ ವೆಚ್ಚವೂ ಅಗಾಧ. ಕಾಯಬೇಕಾದ ಅವಧಿ ದೀರ್ಘ – ಅನಿಶ್ಚಿತ. ಬದಲಿಗೆ ಆಕಾಶ ತೋರಿಸುವ ದಾರಿಯೊಂದಿದೆ. ಬೀಳುವ ಮಳೆಯನ್ನು ಅಲ್ಲಲ್ಲೇ ತಡೆದು ಇಂಗಿಸುವುದು. ಫಲಿತಾಂಶ ಕ್ಷಿಪ್ರ. ವೆಚ್ಚ ಅತ್ಯಲ್ಪ, ವ್ಯವಸ್ಥೆ ಸುಸ್ಥಿರ.

ಈ ಮಾತು ಬೆಂಗಳೂರಿಗೆ ಮಾತ್ರವಲ್ಲ. ದೇಶಕ್ಕಿಡೀ ಪ್ರಸ್ತುತ. ಪ್ರಜ್ಞಾವಂತ ಬೆಂಗಳೂರಿಗರಿಗೆ ಇದು ಎಷ್ಟು ಬೇಗ ಅರ್ಥವಾಗುತ್ತದೋ, ಅಷ್ಟು ಒಳ್ಳೆಯದು.

ಬಯೋಮ್ ಸೊಲ್ಯೂಶನ್ಸ್ ಸಂಪರ್ಕ: 080 – 4167 2790. ಇ–ಮೇಲ್: water@biomesolutions.com


ಗಿಜಿಗುಟ್ಟುವ ರಸ್ತೆಯ ನಡುವೆಯೂ ಇಂಗುಬಾವಿ